'ಈಗ ಕನ್ನಡ ಸಿನಿಮಾ ಇಂಡಸ್ಟ್ರಿಯಲ್ಲಿ ಇರುವ ಪೈಪೋಟಿ ಸಾಕಾಗ್ತಿಲ್ಲ. ಈಗೇನಿದೆಯೋ ಇದಕ್ಕಿಂತ ಹೆಚ್ಚಿನ ಸ್ಪರ್ಧೆ ಬೇಕು. ಪೈಪೋಟಿ ಅಂದ್ರೆ ಸಾಕಷ್ಟಿರಬೇಕು, ಸ್ಟೇಜ್ ಮೇಲೆ ಹೋಗೋಕೆ ಹಿಂದೆ ಮುಂದೆ ನೋಡಬೇಕು. ಕಮಾನ್... ಅದನ್ನು ಯುದ್ಧ ಅನ್ನೋದು, ಅದಕ್ಕೆ ತಯಾರಿ ನಡೆಯೋದು. ಏನೂ ಬೇಡ ಎಲ್ರೂ ಮನೆಗೋಗಿ ಅಂದ್ರೆ ಹೇಗೆ? ಏನಕ್ಕೆ ನಾವು ಎದುರಾಬದುರು ಗಾಡಿ ಓಡಿಸ್ತೀವಿ. ಎಲ್ರೂ ಒನ್‌ವೇದಲ್ಲೇ ಓಡಿಸ್ಬೋದಿತ್ತಲ್ಲ? ನನಗೆ ಎದುರುಗಡೆಯಿಂದಲೂ ಗಾಡಿ ಬರಬೇಕು. ಇಲ್ಲಾಂದ್ರೆ ಡ್ರೈವಿಂಗ್ ಕಲಿತು ಏನು ಪ್ರಯೋಜನ?'

ಇಂದಿನ ಪೈಪೋಟಿಹೀನ ಕನ್ನಡ ಚಿತ್ರರಂಗದ ಪರಿಸ್ಥಿತಿಯ ಬಗ್ಗೆ ನಿರ್ದೇಶಕ ಸೂರಿ ಸಂದರ್ಶನವೊಂದರಲ್ಲಿ ತಮ್ಮದೇ ಆದ ರಾ ಸ್ಟೈಲಿನಲ್ಲಿ ನೀಡಿರುವ ಪ್ರತಿಕ್ರಿಯೆ ಇದು. ಹೀಗೆ ಮಾತಾಡುವುದಕ್ಕೂ ಮುನ್ನ ಚಿತ್ರರಂಗದಲ್ಲಿ ಹಿಂದೊಮ್ಮೆ ಇದ್ದ ಪೈಪೋಟಿಯನ್ನು ಅವರು ನೆನಪಿಸಿಕೊಂಡಿದ್ದರು. ಅದು ಅಂತಿಂಥ ಪೈಪೋಟಿ ಅಲ್ಲ. 'ಒಂದು ಕಡೆ ಅಂಬರೀಶ್ ಅವರ ಸಾಲು ಸಾಲು ಸಿನಿಮಾಗಳು, ಮತ್ತೊಂದು ಕಡೆ ವಿಷ್ಣು ಸಿನಿಮಾಗಳು, ಇನ್ನೊಂದೆಡೆ ರಾಜ್‌ಕುಮಾರ್ ಸಿನಿಮಾಗಳು, ಮತ್ತೆ ಶಂಕರ್‌ನಾಗ್ ಸಿನಿಮಾಗಳು... ಸಿನಿಮಾ ಸಿನಿಮಾ ಸಿನಿಮಾ... ಅದರ ಮಧ್ಯೆ ಚಿರಂಜೀವಿ... ಎಲ್ಲ ಸಿನಿಮಾಗಳೂ ಗಲಾಟೆಮಯ... ರಾಜ್‌ಕುಮಾರ್ ಸಿನಿಮಾಗೇ ರಾಜ್‌ಕುಮಾರ್ ಅವರದ್ದೇ ಇನ್ನೊಂದು ಸಿನಿಮಾ ಪೈಪೋಟಿ!'

ಹಿಂದಿನ ಆ ಪೈಪೋಟಿಯ ಕಾಲದಲ್ಲಿ ಸರತಿಯಲ್ಲಿ ನಿಂತು ಸಿನಿಮಾ ನೋಡಿದವರಿಗೆ ಸೂರಿ ಬಯಸುತ್ತಿರುವ ಕಾಂಪಿಟೇಷನ್‌ನ ಅರ್ಥ ಆಗುತ್ತದೆ.

ಇದೀಗ ಇಂದಿನ ಗಾಂಧಿನಗರದ ಕಡೆಗೆ ಕಣ್ಣುಹಾಯಿಸೋಣ. ಬೆಂಗಳೂರಿನ ಕೆಂಪೇಗೌಡ ರಸ್ತೆಯಲ್ಲಿರುವ ಹಲವು ಚಿತ್ರಮಂದಿರಗಳು ಕಣ್ಮುಚ್ಚಿವೆ. ಇನ್ನು ಕೆಲವು, ದಯಾಮರಣಕ್ಕೆ ಅರ್ಜಿ ಹಾಕಿ ಕಾಯುತ್ತಿರುವವರಂತೆ ವೆಂಟಿಲೇಟರ್‌ನಲ್ಲಿ ಉಸಿರಾಡುತ್ತಿವೆ. ಇತ್ತೀಚೆಗೆ ಸ್ಥಗಿತಗೊಂಡ 'ಕಪಾಲಿ' ಚಿತ್ರಮಂದಿರದೊಳಗಿನ ನೀರವ ಮೌನ ಕನ್ನಡ ಚಿತ್ರರಂಗದ ಸದ್ಯದ ಪರಿಸ್ಥಿತಿಗೂ ರೂಪಕ ಆಗಬಹುದೇನೊ?

ಈ ವರ್ಷ ಬಿಡುಗಡೆಯಾಗಿರುವ ಸಿನಿಮಾಗಳ ಸಂಖ್ಯೆ ಈಗಾಗಲೇ 180 ದಾಟಿವೆ. ಅವುಗಳಲ್ಲಿ ಗೆದ್ದಿರುವುದೆಷ್ಟು, ಸದ್ದು ಮಾಡಿದ್ದೆಷ್ಟು ಎಂದು ಯೋಚಿಸಿದರೆ ಐದರ ಮೇಲೆ ಬೆರಳು ಮಡಚಲು ತಡಬಡಾಯಿಸುವಂತಾಗುತ್ತದೆ. ವರ್ಷಾರಂಭಕ್ಕೆ ಬಂದ 'ಟಗರು' ಬಿಟ್ಟರೆ ಸ್ಟಾರ್ ಸಿನಿಮಾ ಅಂತ ಬಂದಿದ್ದು ಕಳೆದ ತಿಂಗಳಿನಲ್ಲಿ ಬಿಡುಗಡೆಯಾದ 'ದಿ ವಿಲನ್'.

ದರ್ಶನ್, ಪುನೀತ್, ಯಶ್, ಗಣೇಶ್, ಧ್ರುವ ಸರ್ಜಾ, ರಕ್ಷಿತ್ ಶೆಟ್ಟಿ ಇವರ ಒಂದೂ ಸಿನಿಮಾ 2018ರಲ್ಲಿ ಬಿಡುಗಡೆಯಾಗಿಲ್ಲ. ದುನಿಯಾ ವಿಜಯ್ ಅವರ 'ಕನಕ' ಚಿತ್ರ ವರ್ಷದ ಆರಂಭದಲ್ಲಿ ಬಂದಷ್ಟೇ ಅರ್ಜೆಂಟ್‌ನಲ್ಲಿ ಹೊರಟು ಹೋಯ್ತು. ಇನ್ನೊಂದೆಡೆ ಹೊಸ ಹುಡುಗರು ಮಾಡಿದ ಸಿನಿಮಾಗಳು ಪ್ರತಿವಾರ 6ರಿಂದ 8 ಸಿನಿಮಾಗಳಂತೆ ಚಿತ್ರಮಂದಿರಗಳಿಗೆ ಬಂದು 'ಹೋದ ಪುಟ್ಟ, ಬಂದ ಪುಟ್ಟ' ಎಂದು ಹಿರಿತೆರೆಯನ್ನು ಮುಟ್ಟಿ ಹೆಚ್ಚು ಹೊತ್ತು ನಿಲ್ಲದೇ ತಿರುಗಿ ಓಡುತ್ತಿವೆ. ವಾರಕ್ಕೆ 11 ಸಿನಿಮಾ ಬಿಡುಗಡೆಯಾದದ್ದೂ ಇದೆ; ಹಾಗೆಯೇ ಒಂದೂ ಸಿನಿಮಾ ಇಲ್ಲದೆ ಮಂಕಾಗಿರುವ ಶುಕ್ರವಾರಗಳೂ ಇವೆ.

ತಾರೆಗಳೆಲ್ಲ ಹೀಗೆ ತೆರೆಯ ಹಿಂದೆ ಮೇಕಪ್ ಮಾಡಿಕೊಳ್ಳುತ್ತಲೇ ನಿದ್ದೆ ಹೋಗಿದ್ದರೆ ಕನ್ನಡ ಚಿತ್ರಮಂದಿರಗಳ ವೇದಿಕೆಯ ಮೇಲೆ ತೆಲುಗು, ತಮಿಳು, ಮಲಯಾಳಂ, ಹಿಂದಿ ಸಿನಿಮಾಗಳು ಬಂದು ಭರ್ಜರಿ ಪ್ರದರ್ಶನ ಕೊಟ್ಟು ಶಿಳ್ಳೆ, ಹಣ ಎರಡನ್ನೂ ಗಿಟ್ಟಿಸಿಕೊಳ್ಳುತ್ತಿವೆ. ಕನ್ನಡದಲ್ಲಿ ಈ ವರ್ಷದ ಸೂಪರ್ ಹಿಟ್ ಸಿನಿಮಾಗಳ ಪಟ್ಟಿ ಕೇಳಿದರೆ 'ಟಗರು' ಬಿಟ್ಟರೆ ಮತ್ತೊಂದು ಹೆಸರು ಹೊಳೆಯುವುದಿಲ್ಲ. 'ಗುಲ್ಟು', 'ಅಯೋಗ್ಯ', 'ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಕಾಸರಗೋಡು' — ಹೀಗೆ ಬೆರಳೆಣಿಕೆಯ




## ಪರ್ಯಾಯದಲ್ಲೂ ಭರವಸೆಯಿಲ್ಲ...

ಮುಖ್ಯವಾಹಿನಿ ಸಿನಿಮಾಗಳು ಪೇಲವವಾಗಿರುವ ದಿನಗಳಲ್ಲಿ ಕನ್ನಡದ ಪರ್ಯಾಯ ಸಿನಿಮಾಗಳು ರಾಷ್ಟ್ರಮಟ್ಟದಲ್ಲಿ ಸುದ್ದಿ ಮಾಡಿದ್ದ ಉದಾಹರಣೆಗಳಿವೆ. ಆದರೆ, ಈಚಿನ ದಿನಗಳಲ್ಲಿ ಪ್ರಯೋಗಶೀಲ ಸಿನಿಮಾಗಳಿಗೆ ಕೂಡ ಕನ್ನಡದಲ್ಲಿ ಬರ ಬಂದಿದೆ. ಬರಗೂರು ರಾಮಚಂದ್ರಪ್ಪ ಅವರನ್ನು ಹೊರತುಪಡಿಸಿದರೆ ಈಗಲೂ ವ್ರತದಂತೆ ಸಿನಿಮಾಗಳನ್ನು ಮಾಡಿಕೊಂಡು ಬಂದಿರುವ ಪರ್ಯಾಯ ಸಿನಿಮಾಗಳ ಮತ್ತೊಬ್ಬ ನಿರ್ದೇಶಕ ಕನ್ನಡದಲ್ಲಿಲ್ಲ. ಈ ವರ್ಷವೂ 'ಬಯಲಾಟದ ಭೀಮಣ್ಣ' ಚಿತ್ರದ ಮೂಲಕ ಬರಗೂರರು ತಮ್ಮ ಸಿನಿಮಾ ರೂಪಿಸುವ ಶಿಸ್ತನ್ನು ಮುಂದುವರಿಸಿದ್ದಾರೆ. ಬರಗೂರರನ್ನು ಹೊರತುಪಡಿಸಿದರೆ ಪಿ. ಶೇಷಾದ್ರಿ ಕೂಡ ನಿಯಮಿತವಾಗಿ ಚಿತ್ರಗಳನ್ನು ರೂಪಿಸುತ್ತಿದ್ದಾರೆ. ಶಿವರಾಮ ಕಾರಂತರ 'ಮೂಕಜ್ಜಿಯ ಕನಸುಗಳು' ಕಾದಂಬರಿಯನ್ನು ಅವರೀಗ ದೃಶ್ಯರೂಪಕ್ಕೆ ತರುತ್ತಿದ್ದಾರೆ. ಹಿರಿಯ ನಿರ್ದೇಶಕ ಗಿರೀಶ ಕಾಸರವಳ್ಳಿಯವರು 'ಕೂರ್ಮಾವತಾರ' ಸಿನಿಮಾದ ನಂತರ ಮತ್ತೆ ಸಿನಿಮಾ ಪ್ರಯೋಗಕ್ಕೆ ತಮ್ಮನ್ನು ಒಡ್ಡಿಕೊಂಡಿಲ್ಲ. ಹೊಸಬರ ಪೈಕಿ 'ತಿಥಿ' ಖ್ಯಾತಿಯ ರಾಮ್ ರೆಡ್ಡಿ ಹೊಸ ಚಿತ್ರದ ಬಗ್ಗೆ ಯಾವುದೇ ಸುದ್ದಿಯಿಲ್ಲ. ಆದರೆ, ಅವರ ಗೆಳೆಯ ಈರೇಗೌಡರ 'ಬಳೆ ಕೆಂಪ' ಕೆಲವು ಅಂತರರಾಷ್ಟ್ರೀಯ ಚಿತ್ರೋತ್ಸವಗಳಲ್ಲಿ ಸುದ್ದಿ ಮಾಡಿದರೂ, ಗೌಡರು 'ಮೀ ಟೂ' ಆಪಾದನೆಗೆ ಸಿಲುಕುವ ಮೂಲಕ ಕೆಂಪನ ಭವಿಷ್ಯ ಮಸುಕಾಗಿದೆ.